ಆಗ್ತದೆ. ಬೇಕಾದ್ರೆ ಎರಡು ಲಾರ್ಜ್ ಹಾಕಿ. ಬಿರಿಯಾನಿ ಬರಲು ಇನ್ನೂ ಅರ್ಧ ಗಂಟೆಯಾಗುತ್ತದೆ..." ಆತ ಖುಷಿ ಬೇಸರಗಳ ಸಂಗಮ ಸ್ಥಿತಿಯನ್ನು ಅನುಭವಿಸುತ್ತಿದ್ದ. ನಾನು ವೈನ್ ಗ್ಲಾಸ್ ತೆಗೆದುಕೊಂಡು ವೈನ್ ಬಗ್ಗಿಸಿಕೊಂಡು ಬಾಯಿಗಿಟ್ಟುಕೊಂಡಿದ್ದೆ. ಅದ್ಭುತವಾದ ರುಚಿ.

"ವಿಶ್ವನಾಥ ವೇಮುಲಶಾಸ್ತ್ರಿ ನಿಮ್ಮ ಬಗ್ಗೆ ಹೇಳಿದ್ದಾರೆ..."

ಹುರಿದ ಮಸಾಲ ಗೋಡಂಬಿಯನ್ನು ಬಾಯಿಗಿಟ್ಟುಕೊಂಡು ಹೇಳಿದ್ದೆ.

"ಏನು ಹೇಳ್ತಾನೆ ಅವ್ನು. ಮಾತಿನಮಲ್ಲ. ನನ್ನ ಹತ್ರ ಡೂಪ್ಲಿಕೇಟ್ ಮಾತುಗಳು ನಡ್ಯಲ್ಲ. ನನಗೆ ರಕ್ತದ ಫ್ರೈ ಅಂದರೆ ತುಂಬಾ ಇಷ್ಟ. ಅದನ್ನು ನಮ್ಮಮ್ಮ ತುಂಬಾ ಚೆನ್ನಾಗಿ ಮಾಡೋಳು. ನಮ್ಮಪ್ಪ ನಾಟಿ ಸಾರಾಯಿಗೆ ನಂಚಿಕೊಂಡು ತಿನ್ನೋನು. ಇವೊತ್ತು ಎಡೆ ಊಟಕ್ಕೆ ಅದನ್ನೂ ಮಾಡಿಸಿರುತ್ತಾರೆ. ಮತ್ತು ಊಟದ ಪಂಕ್ತಿಗಳಲ್ಲೂ ಎಲೆಗಳಿಗೆ ಒಂದೊಂದು ಹಿಡಿಯನ್ನು ಬಡಿಸುತ್ತಾರೆ. ತಮಾಷೆಯೆಂದರೆ ನನಗೆ ರಕ್ತ ನೋಡಿದರೇನೇ ಭಯವಾಗಿ ಮೈ ಜುಂ ಅನ್ನುತ್ತದೆ. ಹಸು, ಎಮ್ಮೆ, ಕುರಿಗಳು ಮರಿಗಳನ್ನು ಹಾಕುವುದನ್ನು ಕೂಡಾ ನಾನು ನೋಡುತ್ತಿರಲಿಲ್ಲ. ಮಿಸ್ಟರ್ ರಾಯಲಪಾಡು ರಾಘವಶರ್ಮಾ ರಕ್ತ ಯಾವುದರಿಂದ ತಯಾರಾಗುತ್ತದೋ... ದೇಹದಿಂದ ರಕ್ತ ಪೂರ್ತಿ ಹೊರಟು ಹೋದರೆ!..." ಆತ ವಿಸ್ಕಿ ಗ್ಲಾಸನ್ನು ಬಾಯಿಗಿಟ್ಟುಕೊಂಡು ಸೊರ್ ಅಂತ ಶಬ್ದ ಮಾಡುತ್ತಾ ದೀರ್ಘವಾದ ಗುಟುಕನ್ನು ಹೀರಿಕೊಂಡಿದ್ದರು.

"ಗಾಳಿ ಮತ್ತು ನೀರಿನಂತೆ ರಕ್ತವೂ ಒಂದು ರೀತಿಯ ಪ್ರಾಣವೇ ಸರಿ. ಇಂಥ ಪ್ರಾಣ ಕಾರಣವಾದ ರಕ್ತವನ್ನು ಶುದ್ಧೀಕರಣ ಮಾಡೋದು ಹೃದಯ. ರಕ್ತ ಒಂದು ವಾಹಕ. ಹಿಮೋಗ್ಲೋಬಿನ್ ರಕ್ತದಲ್ಲಿ ಇರೋದರಿಂದ ಇಡೀ ಜೀವಜಗತ್ತಿನ ಎಲ್ಲಾ ಪ್ರಭೇದದ ಪ್ರಾಣಿಗಳ ದೇಹದಲ್ಲಿರುವ ರಕ್ತ ಕೆಂಪು ಬಣ್ಣದ್ದೆ ಆಗಿರುತ್ತದೆ..." ಎಂದು ಹೇಳಿ ನಾನೂ ಒಂದು ದೀರ್ಘವಾದ ಗುಟುಕು ವೈನನ್ನು ಹೊಟ್ಟೆಗಿಳಿಸಿಕೊಂಡಿದ್ದೆ.

"ರಕ್ತಕ್ಕೆ ಕೆಂಪು ಬಣ್ಣ ಕೊಟ್ಟಿದ್ದು ದೇವರು..." ಥಟ್ಟನೆ ಹೇಳಿದ್ದ ಅವರ ಮಾತಿಗೆ, "ಹೌದು..." ಎಂದಿದ್ದೆ.

ಚೆರ್ಲಪಲ್ಲಿ ನರಸಿಂಹರೆಡ್ಡಿ ಬಾತ್‌ರೂಮಿಗೆ ಹೋಗಿ ಬಂದು ಮಾಮೂಲಿ ಜಾಗದಲ್ಲಿ ಕೂತುಕೊಳ್ಳುತ್ತಾ, "ಇನ್ನೇನು ಹೇಳಿದ ವಿಶ್ವನಾಥ ವೇಮುಲಶಾಸ್ತ್ರಿ. ನಾವು ಆತನನ್ನು ಬರಿ ಶಾಸ್ತ್ರಿ ಅಂತಾಲೆ ಕರೆಯೋದು..." ಕಣ್ಣುಗಳನ್ನು ಸ್ವಲ್ಪ ಕಿರಿದು ಮಾಡಿಕೊಂಡು ಕೇಳಿದ್ದರು.

"ಹಿ ಈಜ್ ವೆರಿ ಪ್ರೌಡ್ ಆಫ್ ಯು. ನೀವು ಸ್ವಲ್ಪ ಡಿಸ್ಟರ್ಬ್ ಆಗಿರೋದನ್ನ ಅವರು ಆತಂಕದಿಂದಲೇ ಹೇಳಿದರು..." ಹೇಳಿದ್ದೆ ನಾನು.

"ಒಂದಿಷ್ಟೂ ಡಿಸ್ಟರ್ಬ್ ಆಗದೆ ಬದುಕಿರೋನು ಈ ಜಗತ್ತಿನಲ್ಲಿ ಯಾರಾದರೂ ಇದ್ದರೆ ಎಳೆದುಕೊಂಡು ಬಂದು ನನ್ನ ಮುಂದೆ ನಿಲ್ಲಿಸೋಕೆ ಹೇಳಿ ಆ ಶಾಸ್ತ್ರಿಗೆ. ನನ್ನನ್ನು ಹಿಮಾಲಯ ಹತ್ತಿಸಿ ಕೆಳಗೆ ಬೀಳಿಸ್ತಾನೆ ಶಾಸ್ತ್ರಿ..."

ಚೆರ್ಲಪಲ್ಲಿ ನರಸಿಂಹರೆಡ್ಡಿ ಮೀಸೆಯನ್ನು ಕುಣಿಸುವಂತೆ ನಕ್ಕಿದ್ದರು. ಅಷ್ಟರಲ್ಲಿ ಒಂದು ದೊಡ್ಡ ವೈರ್ ಬ್ಯಾಗ್ ಹಿಡಿದುಕೊಂಡು ಕುಳ್ಳನೆಯ ವ್ಯಕ್ತಿಯೊಬ್ಬರು ಒಳ ಬಂದಿದ್ದರು. ವಿಶೇಷ ಅತ್ತರಿನ ಸುಮಧುರ ವಾಸನೆ ಹರಡಿಕೊಂಡಿತ್ತು. ಆ ವ್ಯಕ್ತಿಯ ಕಣ್ಣುರೆಪ್ಪೆ, ಕಣ್ಣು ಹುಬ್ಬುಗಳಿಗೆ ದಟ್ಟವಾದ ಕಾಡಿಗೆ ಬಳಿದುಕೊಂಡಿರುವುದು ಎದ್ದು ಕಾಣುತ್ತಿತ್ತು. ಒಂದು ಬಿಳಿ ಹಾಫ್ ಶರ್ಟ್, ಒಂದು ಬಿಳಿಯ ಪಾಯಿಜಾಮ. ಕೈ ಬೆರಳುಗಳಲ್ಲಿ ಉಂಗುರವಿರಲಿ ಕೈಗೆ ವಾಚ್ ಕೂಡ ಕಟ್ಟಿರಲಿಲ್ಲ.

"ಅಣ್ಣಾ ಬಿಸಿ ಬಿಸಿ ಇದೆ..." ಎಂದ ಆ ವ್ಯಕ್ತಿ ಬ್ಯಾಗ್ ಮುಟ್ಟುತ್ತಾ.